# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1123
ಸದಸ್ಯರ ಹೆಸರು : ಶ್ರೀ ಎಂ. ಸಿ. ವೇಣುಗೋಪಾಲ
ಉತ್ತರಿಸುವ ದಿನಾಂಕ : 20.12.2018
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಸದರಿ ಶಾಲೆಗಳ ಮೂಲ ಉದ್ದೇಶವೇನು; ಹಾಗೂ ಪ್ರವೇಶಾತಿ ವಿಧಾನ ಯಾವುದು:</td><td>ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿ ಈ ಕೆಳಕಂಡಂತೆ ವಿಶೇಷ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.
<table>
<tr><th rowspan="2">ಕ್ರ ಸಂ.</th><th rowspan="2">ಯೋಜನೆಯ ಹೆಸರು</th><th colspan="2">ಶಾಲೆಗಳ ಸಂಖ್ಯೆ</th><th rowspan="2">ಶಾಲೆಗಳ ಒಟ್ಟು ಸಂಖ್ಯೆ</th><th rowspan="2">ಫಲಾನು ಭವಿಗಳ ಸಂಖ್ಯೆ</th></tr>
<tr><th>ವಸತಿ ಯುತ</th><th>ವಸತಿ ರಹಿತ</th></tr>
<tr><td>1</td><td>ಸರ್ಕಾರಿ ವಿಶೇಷ ಶಾಲೆಗಳು</td><td>09</td><td>–</td><td>09</td><td>526</td></tr>
<tr><td>2</td><td>1982ರ ರಾಜ್ಯ ಅನುದಾನಿತ ವಿಶೇಷ ಶಾಲೆಗಳು</td><td>20</td><td>14</td><td>34</td><td>2240</td></tr>
<tr><td>3</td><td>ಅಂಗವಿಕಲ ಮಕ್ಕಳ ವಿಶೇಷ ಶೈಕ್ಷಣಿಕ ಯೋಜನೆ</td><td>106</td><td>29</td><td>135</td><td>10041</td></tr>
<tr><td>4</td><td>ದೀನ್ ದಯಾಳ್ ರಿಹ್ಯಾಬಿಲಿಟೇಷನ್ ಯೋಜನೆ (ಕೇಂದ್ರ ಸರ್ಕಾರ)</td><td>02</td><td>–</td><td>02</td><td>384</td></tr>
<tr><td>5</td><td>ಇಲಾಖೆಯಿಂದ ಅನುಮತಿ ಪಡೆದು ಅನುದಾನ ರಹಿತ ಶಾಲೆಯನ್ನು ನಡೆಸುತ್ತಿರುವ ಖಾಸಗಿ ಶಾಲೆಗಳು</td><td>01</td><td>04</td><td>05</td><td>146</td></tr>
</table>
ಸದರಿ ಶಾಲೆಗಳಲ್ಲಿ ಬರುವ ವಸತಿಯುತ ಹಾಗೂ ವಸತಿರಹಿತ ಶಾಲೆಗಳನ್ನು ಅನುಬಂಧ–01ರಲ್ಲಿ ಒದಗಿಸಿದೆ.<br>
ವಿಶೇಷ ಮಕ್ಕಳಿಗೆ ಸಾಮಾನ್ಯ ಮಕ್ಕಳಂತೆ ಶಿಕ್ಷಣ ನೀಡುವುದು ಹಾಗೂ ಸಮಾಜದ ಮುಖ್ಯವಾಹಿನಿಗೆ ತರುವುದು ಈ ಶಾಲೆಗಳ ಮುಖ್ಯ ಉದ್ದೇಶವಾಗಿದೆ.<br>
ಅಂಗವಿಕಲತೆ ಪ್ರಮಾಣ ಪತ್ರ ಹೊಂದಿದ ಮಕ್ಕಳನ್ನು ನಿಯಮಾನುಸಾರ ದಾಖಲು ಮಾಡಿಕೊಳ್ಳಲಾಗುವುದು.</td></tr>
<tr><td>ಆ)</td><td>ಸದರಿ ಶಾಲೆಗಳಲ್ಲಿ ಮಕ್ಕಳಿಗೆ ವಿಧಿಸುತ್ತಿರುವ ಶುಲ್ಕವೆಷ್ಟು; (ತರಗತಿವಾರು ವಿವರ ನೀಡುವುದು)</td><td>ಸರ್ಕಾರಿ ಶಾಲೆಗಳಲ್ಲಿ ಹಾಗೂ ಸರ್ಕಾರದಿಂದ ಅನುದಾನ ಪಡೆದು ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಲ್ಲಿ ಯಾವುದೇ ಶುಲ್ಕವನ್ನು ವಿಧಿಸುತ್ತಿರುವುದಿಲ್ಲ. ಖಾಸಗಿ ಶಾಲೆಗಳಲ್ಲಿ ವಿಧಿಸುವ ಶುಲ್ಕದ ಬಗ್ಗೆ ಮಾಹಿತಿ ಇರುವುದಿಲ್ಲ.</td></tr>
<tr><td>ಇ)</td><td>ಪ್ರಸಕ್ತ ಸಾಲಿನಲ್ಲಿ ಸದರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; (ತರಗತಿವಾರು ವಿವರ ನೀಡುವುದು)</td><td>ಅನುಬಂಧ–02ರಲ್ಲಿ ಒದಗಿಸಿದೆ.</td></tr>
</table>

| | | |
|---|---|---|
| ಈ) | ಸದರಿ ಶಾಲೆಗಳಲ್ಲಿ ಅನುಸರಿಸುತ್ತಿರುವ ಬೋಧನಾ ಪಠ್ಯ ಕ್ರಮ ಯಾವುದು? (ವಿವರವಾದ ಮಾಹಿತಿ ಒದಗಿಸುವುದು) | ಸರ್ಕಾರಿ ಶಾಲೆಗಳಲ್ಲಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುವ ದೃಷ್ಟಿದೋಷ ಹಾಗೂ ಶ್ರವಣದೋಷವುಳ್ಳ ಮಕ್ಕಳಿಗೆ ಶಿಕ್ಷಣ ಇಲಾಖೆಯ ಅನುಸಾರ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿದೆ.<br>ಶ್ರವಣದೋಷವುಳ್ಳ ಮಕ್ಕಳ ವಿಶೇಷ ಶಾಲೆಗಳಲ್ಲಿ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಹಿಯರಿಂಗ್ ಹ್ಯಾಂಡಿಕ್ಯಾಪ್ಡ್ ಹಾಗೂ ಅಂಧ ಮಕ್ಕಳ ಶಾಲೆಗಳಲ್ಲಿ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ವಿಜ್ಯುಯಲಿ ಹ್ಯಾಂಡಿಕ್ಯಾಪ್ಡ್ ಇವರ ಬೋಧನಾ ಶೈಲಿಯನ್ನು ಅನುಸರಿಸಲಾಗುತ್ತಿದೆ.<br>ಬುದ್ಧಿಮಾಂದ್ಯ ಮಕ್ಕಳಿಗೆ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಮೆಂಟಲಿ ಹ್ಯಾಂಡಿಕ್ಯಾಪ್ಡ್ ಇವರ ಪಠ್ಯಕ್ರಮ ಹಾಗೂ ಬೋಧನಾ ಕ್ರಮವನ್ನು ಅನುಸರಿಸಲಾಗುತ್ತಿದೆ. |

**ಸಂಖ್ಯೆ: ಮಮಇ 259 ಪಿಹೆಚ್‌ಪಿ 2018**

(ಡಾ॥ ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ,
ಹಿರಿಯ ನಾಗರೀಕರು ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

[illegible]
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು